ಕರ್ನಾಟಕ ಸರ್ಕಾರ
ನಿರ್ದೇಶಕರಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು
E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ:ಪಪೂಶಿ/ಶೈಶಾ-02/ಕಾ.ಸಂ.ಬದಾ /2020-21 ದಿನಾಂಕ:- 25-11.2020

## ಸುತ್ತೋಲೆ

**ವಿಷಯ:-ಪ್ರಥಮ ಪಿಯುಸಿಯ ದಾಖಲಾತಿಗೆ ದಿನಾಂಕವನ್ನು ವಿಸ್ತರಿಸುವ ಬಗ್ಗೆ.**

**ಉಲ್ಲೇಖ:**-1. ನಿರ್ದೇಶಕರು(ಪರೀಕ್ಷೆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇವರ ಪತ್ರ ಸಂಖ್ಯೆ ಎ8/ಎಸ್.ಎಸ್.ಎಲ್.ಸಿ/ಪ.ದಾ/12/2020-21 ದಿನಾಂಕ: 20.10.2020

2. ಈ ಕಛೇರಿಯ ಸಮ ಪತ್ರ ಸಂಖ್ಯೆ ದಿನಾಂಕ: 23.10.2020
3. ವಿದ್ಯಾರ್ಥಿಗಳ ಹಾಗೂ ಪೋಷಕರ ಮನವಿ

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 01 ಮತ್ತು 02 ರಪ್ರಕಾರ ಪ್ರಥಮ ಪಿಯುಸಿ ದಾಖಲಾತಿಗೆ ಕೊನೆಯ ದಿನಾಂಕವನ್ನು ದಿನಾಂಕ: 27-11-2020 ರವರೆಗೆ ವಿಸ್ತರಿಸಲಾಗಿತ್ತು. ಮುಂದುವರೆದು, ಉಲ್ಲೇಖ 03 ರಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರ ಮನವಿಯ ಮೇರೆಗೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರಥಮ ಪಿಯುಸಿ ದಾಖಲಾತಿ ಮತ್ತು ಪ್ರಥಮ ಪಿಯುಸಿಯ ಕಾಲೇಜು ಬದಲಾವಣೆಯನ್ನು ದಿನಾಂಕ: 12.12.2020 ರವರೆಗೆ ವಿಸ್ತರಿಸಲಾಗಿದೆ. ದಾಖಲಾತಿ ಶುಲ್ಕವನ್ನು ಖಜಾನೆಗೆ ಮಾರನೇ ಕಾರ್ಯನಿರತ ದಿನದಂದು ಕಡ್ಡಾಯವಾಗಿ ಪಾವತಿಸುವುದು.

ಎಲ್ಲಾ ಪ್ರಾಂಶುಪಾಲರು ಕಾಲೇಜಿನ ಸೂಚನಾ ಫಲಕದಲ್ಲಿ ಸದರಿ ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸುವುದು ಹಾಗೂ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ಸೂಕ್ತ ವಿಧಾನದಿಂದ ತಿಳಿಸಲು ಸೂಚಿಸಲಾಗಿದೆ.

**ವಿ.ಸೂ:- 2020-21ನೇ ಸಾಲಿಗೆ ಸಂಬಂಧಿಸಿದಂತೆ, ಯಾವುದೇ ಕಾರಣಕ್ಕೂ ಪ್ರಥಮ ಪಿಯುಸಿ ದಾಖಲಾತಿ ಮತ್ತು ಪ್ರಥಮ ಪಿಯುಸಿಯ ಕಾಲೇಜು ಬದಲಾವಣೆ ಪ್ರಕ್ರಿಯೆಯ ಅವಧಿಯನ್ನು ಮತ್ತೆ ವಿಸ್ತರಣೆ ಮಾಡಲಾಗುವುದಿಲ್ಲ.**

**ಮಾನ್ಯ ನಿರ್ದೇಶಕರ ಅದೇಶದ ಮೇರೆಗೆ**

R. Yusuf
25/11/2020
ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು:-**

1. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ- ಮುಂದಿನ ಕ್ರಮಕ್ಕಾಗಿ
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರ ಗಮನಕ್ಕೆ ತರಲು, ಜಿಲ್ಲಾ ಉಪನಿರ್ದೇಶಕರ ಮೂಲಕ - ಮುಂದಿನ ಕ್ರಮಕ್ಕಾಗಿ
3. ಜಂಟಿ ನಿರ್ದೇಶಕರು (ಪರೀಕ್ಷೆ/ಆಡಳಿತ/ಶೈಕ್ಷಣಿಕ/ಮಾನ್ಯತೆ/RIDF),ಪದವಿ ಪೂರ್ವ ಶಿಕ್ಷಣ ಇಲಾಖೆ -ಮಾಹಿತಿಗಾಗಿ
4. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ-ಮಾಹಿತಿಗಾಗಿ
5. ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ- ವೆಬ್‌ಸೈಟ್‌ನಲ್ಲಿ ಅಳವಡಿಸಲು
6. ಕಛೇರಿ ಪ್ರತಿ.